# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 766 (998) |
| ಸದಸ್ಯರ ಹೆಸರು | ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 28.09.2020 |
| ಉತ್ತರಿಸಬೇಕಾದ ಸಚಿವರು | ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) |

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಎಷ್ಟು ಜನ ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ತಿಂಗಳು ಅವರಿಗೆ ನೀಡುತ್ತಿರುವ ವೇತನ ಮತ್ತಿತರ ಸೌಲಭ್ಯಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು) | <u>ಕಾಲೇಜು ಶಿಕ್ಷಣ</u><br><br>ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ಕಾಲೇಜುಗಳಲ್ಲಿ ತರಗತಿಗಳು ಇನ್ನು ಪ್ರಾರಂಭವಾಗದೇ ಇರುವುದರಿಂದ 2020-21ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ.<br><br>ಕಳೆದ 2019-20ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ್ದ ಅತಿಥಿ ಉಪನ್ಯಾಸಕರ ಸಂಖ್ಯೆ:14447. (ಅನುಬಂಧ -1ರಲ್ಲಿ ನೀಡಿದೆ).<br><br>ಸರ್ಕಾರದ ಆದೇಶ ಸಂಖ್ಯೆ:ಇಡಿ/66/ಡಿಸಿಇ/2017 ದಿನಾಂಕ:04.04.2017 ರನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಲ್ಲಿ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಕನಿಷ್ಠ ಶೇ.55ರಷ್ಟು ಅಂಕಗಳನ್ನು ಪಡೆದು ಎನ್‌ಇಟಿ/ಎಸ್‌ಎಲ್‌ಇಟಿ ಅಥವಾ ಪಿ.ಹೆಚ್‌ಡಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಗೌರವಧನ ರೂ.13,000/- ಹಾಗೂ ಸ್ನಾತಕೋತ್ತರ ಪದವಿ ಪಡೆದ ಅತಿಥಿ ಉಪನ್ಯಾಸಕರಿಗೆ ರೂ.11,000/- ಗಳನ್ನು ಮಾತ್ರ ಪಾವತಿಸಲಾಗುತ್ತಿದೆ.<br><br><u>ತಾಂತ್ರಿಕ ಶಿಕ್ಷಣ</u><br>2019-20ನೇ ಸಾಲಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 1326 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ವಿವರವನ್ನು ಅನುಬಂಧ-2ರಲ್ಲಿ ನೀಡಿದೆ.<br>ಸರ್ಕಾರದ ಆದೇಶ ಸಂಖ್ಯೆ: ಇಡಿ 16 ಟಿಪಿಇ 2017, ದಿನಂಕ: 11.12.2019ರನ್ವಯ ಪ್ರಸ್ತುತ ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಮಾಹೆಯಾನ ರೂ.12,500/- ಮತ್ತು ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಮಾಹೆಯಾನ ರೂ.15,000/- ಗಳನ್ನು ಪಾವತಿಸಲಾಗುತ್ತಿದೆ. |

**ವಿಶ್ವವಿದ್ಯಾಲಯ**

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ವಿಶ್ವವಿದ್ಯಾಲಯದ ಹೆಸರು | ಅತಿಥಿ ಉಪನ್ಯಾಸಕರ ಸಂಖ್ಯೆ |
|---|---|---|
| 1 | ಬೆಂಗಳೂರು ವಿಶ್ವವಿದ್ಯಾಲಯ | 430 |
| 2 | ಕರ್ನಾಟಕ ವಿಶ್ವವಿದ್ಯಾಲಯ | 519 |
| 3 | ಮೈಸೂರು ವಿಶ್ವವಿದ್ಯಾಲಯ | 836 |
| 4 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ | 01 |
| 6 | ದಾವಣಗೆರೆ ವಿಶ್ವವಿದ್ಯಾಲಯ | 43 |
| 7 | ಗುಲ್ಬರ್ಗಾ ವಿಶ್ವವಿದ್ಯಾಲಯ | 343 |
| 8 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ | 66 |
| 9 | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ | 35 |
| 10 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ | 83 |
| 11 | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ | 38 |
| 12 | ಕುವೆಂಪು ವಿಶ್ವವಿದ್ಯಾಲಯ | 334 |
| 13 | ಮಂಗಳೂರು ವಿಶ್ವವಿದ್ಯಾಲಯ | 335 |
| 14 | ತುಮಕೂರು ವಿಶ್ವವಿದ್ಯಾಲಯ | 181 |
| 15 | ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ | 31 |
| 16 | ಬೆಂಗಳೂರು ನಗರ ವಿಶ್ವವಿದ್ಯಾಲಯ | 154 |
| 17 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ | 57 |
| | ಒಟ್ಟು | **3486** |

ಯುಜಿಸಿ ಮಾರ್ಗಸೂಚಿಗಳನ್ವಯ **ಅತಿಥಿ ಉಪನ್ಯಾಸಕರ ವಿದ್ಯಾರ್ಹತೆ ಹಾಗೂ ಕಾರ್ಯಭಾರವನ್ನು ಅನುಸರಿಸಿ** ವಿಶ್ವವಿದ್ಯಾಲಯಗಳು ವೇತನ ನೀಡುತ್ತಿವೆ.

| | | |
|---|---|---|
| **ಆ)** | **ಇವರ ವೇತನ ಹೆಚ್ಚಿಸಬೇಕೆಂಬ ಬೇಡಿಕೆ ಜಾರಿಗೊಳಿಸಲಾಗಿದೆಯೇ; ಜಾರಿಗೊಳಿಸಿದ್ದರೆ ಎಷ್ಟು ವೇತನ ಹೆಚ್ಚಿಸಲಾಗಿದೆ; ಇಲ್ಲದಿದ್ದಲ್ಲಿ ಯಾವಾಗ ಹೆಚ್ಚಿಸಲಾಗುವುದು.** | **ಕಾಲೇಜು ಶಿಕ್ಷಣ**<br>**ಪ್ರಸ್ತುತ ಪಾವತಿಸಲಾಗುತ್ತಿರುವ ಮಾಸಿಕ ಗೌರವಧನದ ಮೊತ್ತವನ್ನು ಪರಿಷ್ಕರಿಸುವ ಸಂಬಂಧ ಆರ್ಥಿಕ ಇಲಾಖೆಯು ಪ್ರಸ್ತುತ ರಾಜ್ಯದಲ್ಲಿ ತಲೆದೂರಿರುವ ಕೋವಿಡ್ –19 ಹಿನ್ನಲೆಯಲ್ಲಿ ಉಂಟಾಗಿರುವ ಆರ್ಥಿಕ ಮುಗ್ಗಟ್ಟಿನ ಹಾಗೂ ಈ ಸಂಬಂಧ ಇರುವ ಆರ್ಥಿಕ ನಿರ್ಬಂಧನೆಯ ಹಿನ್ನಲೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಗೌರವಧನ ಹೆಚ್ಚಿಸಲು ಸಾಧ್ಯವಿರುವುದಿಲ್ಲವೆಂದು ಅಭಿಪ್ರಾಯಿಸಿರುವ ಹಿನ್ನಲೆಯಲ್ಲಿ ಇದರಂತೆ ಆಯುಕ್ತರಿಗೆ ಪತ್ರ ಸಂಖ್ಯೆ: ಇಡಿ 07 ಡಿಸಿಇ 2019, ದಿನಾಂಕ: 09.06.2020 ತಿಳಿಸಲಾಗಿದೆ.** |

| | | |
|---|---|---|
| | | ತಾಂತ್ರಿಕ ಶಿಕ್ಷಣ<br>ಸರ್ಕಾರದ ಆದೇಶ ಸಂಖ್ಯೆ: ಇಡಿ 16 ಟಿಪಿಇ 2017, ದಿನಾಂಕ: 11.12.2019ರನ್ವಯ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರಿಗೆ ಮಾಹೆಯಾನ ಭತ್ಯೆ ರೂ.7,500/- ರಿಂದ ರೂ.12,500/-ಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರಿಗೆ ಮಾಹೆಯಾನ ಭತ್ಯೆ ರೂ. 10,000/- ರಿಂದ 15,000/- ಕ್ಕೆ ಹೆಚ್ಚಿಸಲಾಗಿದೆ.<br><br>ವಿಶ್ವವಿದ್ಯಾಲಯ<br>ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಆಯಾಯ ವಿಶ್ವವಿದ್ಯಾನಿಲಯಗಳ ಆಂತರಿಕ ಸಂಪನ್ಮೂಲಗಳಿಂದ ಭರಿಸಲಾಗುತ್ತಿದ್ದು, ಅತಿಥಿ ಉಪನ್ಯಾಸಕರ ವಿದ್ಯಾರ್ಹತೆ ಹಾಗೂ ಕಾರ್ಯಭಾರವನ್ನು ಅನುಸರಿಸಿ ಆಯಾಯ ವಿಶ್ವವಿದ್ಯಾನಿಲಯಗಳು ಗೌರವಧನ ಹೆಚ್ಚಳದ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತವೆ. |
| ಇ) | ಅತಿಥಿ ಉಪನ್ಯಾಸಕರು ಸೇವೆಯನ್ನು ಖಾಯಂಗೊಳಿಸಬೇಕೆಂದು ಹಲವಾರು ದಿನಗಳಿಂದ ಹೋರಾಟ ನಡೆಸುತ್ತಿದ್ದು, ಅವರನ್ನು ಖಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? | ವಿಶ್ವವಿದ್ಯಾಲಯ /ಕಾಲೇಜು ಶಿಕ್ಷಣ / ತಾಂತ್ರಿಕ ಶಿಕ್ಷಣ ಇಲಾಖೆಗಳಲ್ಲಿ ಪ್ರತಿ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಉಂಟಾಗುವ ಕಾರ್ಯಭಾರವನ್ನು ಮೊದಲು ಖಾಯಂ ಅಧ್ಯಾಪಕರಿಗೆ ಹಂಚಿಕೆ ಮಾಡಿ, ನಂತರ ಉಳಿಕೆಯಾಗುವ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸಲು ಮಾತ್ರ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ.<br>ಅತಿಥಿ ಉಪನ್ಯಾಸಕರುಗಳು ಇಲಾಖೆಯಲ್ಲಿ ಯಾವುದೇ ಮಂಜೂರಾದ ಖಾಲಿ ಹುದ್ದೆಗಳ ಎದುರಾಗಿ ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ. ಬದಲಾಗಿ ಆಯಾ ಶೈಕ್ಷಣಿಕ ವರ್ಷದಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ಮಾತ್ರ ಸೀಮಿತಗೊಳಿಸಿ, ತಾತ್ಕಾಲಿಕವಾಗಿ, ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಆದ್ದರಿಂದ, ಅವರುಗಳ ತಾತ್ಕಾಲಿಕ ಸೇವೆಯನ್ನು ಪರಿಗಣಿಸಿ ಸೇವಾ ಭದ್ರತೆಯನ್ನು ಒದಗಿಸಿ, ಖಾಯಂ ಮಾಡಲು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. |

**ಇಡಿ 172 ಡಿಸಿಇ 2020**

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಅನುಬಂಧ-1

## Department of Collegiate Education
## Guest Faculty District wise Count(2019-20)

| Sl No | DistrictName | Experience | | | | | | | | Total |
|---|---|---|---|---|---|---|---|---|---|---|
| | | 0 | 1 to 5 | 6 to 10 | 11 to 15 | 16 to 20 | 21 to 25 | 25 to 30 | 31 & above | |
| 1 | Bagalkote | 104 | 191 | 144 | 32 | | | | | 471 |
| 2 | Bangalore | 225 | 371 | 133 | 27 | 5 | 2 | 1 | 1 | 765 |
| 3 | Bangalore Rural | 46 | 61 | 39 | 5 | 3 | 2 | | | 156 |
| 4 | Belgaum | 85 | 209 | 207 | 56 | 4 | | | | 561 |
| 5 | Bellary | 185 | 306 | 156 | 51 | 3 | 1 | | | 702 |
| 6 | Bidar | 43 | 98 | 80 | 8 | | | | | 229 |
| 7 | Bijapur | 85 | 117 | 109 | 16 | | | | | 327 |
| 8 | Chamarajanagar | 35 | 97 | 57 | 15 | 3 | | | | 207 |
| 9 | Chickmagalur | 75 | 175 | 153 | 35 | 9 | | | | 447 |
| 10 | Chikkaballapur | 79 | 162 | 87 | 15 | | | | | 343 |
| 11 | Chitradurga | 100 | 259 | 207 | 33 | 7 | 1 | | 1 | 608 |
| 12 | Dakshina Kannada | 98 | 285 | 187 | 29 | | 1 | | | 600 |
| 13 | Davanagere | 97 | 212 | 146 | 25 | 7 | | | | 487 |
| 14 | Dharwad | 75 | 117 | 50 | 17 | 1 | | | | 260 |
| 15 | Gadag | 80 | 129 | 92 | 23 | 4 | 1 | | | 329 |
| 16 | Gulbarga | 84 | 189 | 140 | 22 | 3 | | | | 438 |
| 17 | Hassan | 198 | 453 | 220 | 58 | 19 | 4 | 1 | | 953 |
| 18 | Haveri | 84 | 204 | 134 | 27 | 5 | 1 | 1 | | 456 |
| 19 | Kolar | 138 | 151 | 73 | 32 | 4 | | | | 398 |
| 20 | Koppal | 105 | 195 | 120 | 18 | 3 | | | | 441 |
| 21 | Madikeri | 25 | 56 | 36 | 5 | 1 | 1 | | | 124 |
| 22 | Mandya | 122 | 249 | 171 | 34 | 5 | | | | 581 |
| 23 | Mysore | 291 | 454 | 228 | 50 | 11 | 4 | | | 1038 |
| 24 | Raichur | 75 | 184 | 128 | 26 | | | | | 413 |
| 25 | Ramnagar | 68 | 136 | 61 | 16 | 2 | | | | 283 |
| 26 | Shimoga | 98 | 270 | 224 | 28 | 8 | | | | 628 |
| 27 | Tumkur | 173 | 301 | 193 | 44 | 7 | | | | 718 |
| 28 | Udupi | 83 | 217 | 178 | 29 | 3 | | | | 510 |
| 29 | Uttara Kannada | 117 | 303 | 208 | 33 | 1 | 1 | | | 663 |
| 30 | Yadgir | 57 | 105 | 127 | 20 | 2 | | | | 311 |
| | **Total** | **3130** | **6256** | **4088** | **829** | **120** | **19** | **3** | **2** | **14447** |

ಅನುಬಂಧ-2

ಅನುಬಂಧ-2

ಸರ್ಕಾರಿ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಮಾಹಿತಿ

| ಕ್ರಸಂ | ಸಂಸ್ಥೆಯ ಹೆಸರು | ಸರ್ಕಾರಿ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕ ಶಾಲೆ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು | ಒಟ್ಟು |
|---|---|---|---|---|
| 1 | ಬಾಗಲಕೋಟೆ ಜಿಲ್ಲೆ | 82 | | 82 |
| 2 | ಬೆಳಗಾವಿ ಜಿಲ್ಲೆ | 27 | | 27 |
| 3 | ಬೆಂಗಳೂರು ಜಿಲ್ಲೆ | 69 | 30 | 99 |
| 4 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 11 | | 11 |
| 5 | ಬೀದರ್ ಜಿಲ್ಲೆ | 48 | | 48 |
| 6 | ವಿಜಯಪುರ ಜಿಲ್ಲೆ | 29 | | 29 |
| 7 | ಬಳ್ಳಾರಿ ಜಿಲ್ಲೆ | 52 | 32 | 84 |
| 8 | ಶಿವಮೊಗ್ಗ ಜಿಲ್ಲೆ | 60 | | 60 |
| 9 | ಮಂಡ್ಯ ಜಿಲ್ಲೆ | 13 | 19 | 32 |
| 10 | ಮೈಸೂರು ಜಿಲ್ಲೆ | 21 | | 21 |
| 11 | ಯಾದಗಿರಿ ಜಿಲ್ಲೆ | 22 | | 22 |
| 12 | ಚಿಕ್ಕಬಳ್ಳಾಪುರ ಜಿಲ್ಲೆ | 27 | | 27 |
| 13 | ಚಿಕ್ಕಮಗಳೂರು ಜಿಲ್ಲೆ | 10 | | 10 |
| 14 | ಚಿತ್ರದುರ್ಗ ಜಿಲ್ಲೆ | 16 | | 16 |
| 15 | ರಾಮನಗರ ಜಿಲ್ಲೆ | 18 | 6 | 24 |
| 16 | ರಾಯಚೂರು ಜಿಲ್ಲೆ | 56 | 20 | 76 |
| 17 | ಉಡುಪಿ ಜಿಲ್ಲೆ | 37 | | 37 |
| 18 | ಉತ್ತರ ಕನ್ನಡ ಜಿಲ್ಲೆ | 74 | 65 | 139 |
| 19 | ಹಾಸನ ಜಿಲ್ಲೆ | 35 | 29 | 64 |
| 20 | ಧಾರವಾಡ ಜಿಲ್ಲೆ | 23 | | 23 |
| 21 | ಹಾವೇರಿ ಜಿಲ್ಲೆ | 31 | 16 | 47 |
| 22 | ಕಲಬುರಗಿ ಜಿಲ್ಲೆ | 45 | | 45 |
| 23 | ಕೊಡಗು ಜಿಲ್ಲೆ | 14 | 22 | 36 |
| 24 | ಕೊಪ್ಪಳ ಜಿಲ್ಲೆ | 37 | | 37 |
| 25 | ಕೋಲಾರ ಜಿಲ್ಲೆ | 30 | | 30 |
| 26 | ಗದಗ ಜಿಲ್ಲೆ | 32 | | 32 |
| 27 | ತುಮಕೂರು ಜಿಲ್ಲೆ | 9 | | 9 |
| 28 | ಚಾಮರಾಜನಗರ ಜಿಲ್ಲೆ | 10 | 27 | 37 |
| 29 | ದಾವಣಗೆರೆ ಜಿಲ್ಲೆ | 15 | | 15 |
| 30 | ದಕ್ಷಿಣ ಕನ್ನಡ ಜಿಲ್ಲೆ | 107 | | 107 |
| | **ಒಟ್ಟು** | **1060** | **266** | **1326** |